ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶ

340. ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ಸಂಪೂರ್ಣ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಇ) ಆ ರೈತರಿಗೆ ಪರಿಹಾರ ಧನ ಕೊಡಲಾಗುವುದೇ ?

ಈ) ಸರ್ಕಾರವು ರೈತರಿಗೆ ಯಾವ ರೀತಿಯ ಸಹಾಯಧನವನ್ನು ಮಾಡುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ) ಕಾಯಿ ಕೊರೆಯುವ ಹುಳುವಿನಿಂದ ತೊಗರಿ ಬೆಳೆಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ತೊಗರಿ ಕಾಯಿ ಕೊರೆಯುವ ಹುಳುವಿನ ಬಾಧೆಯನ್ನು ತಡೆಗಟ್ಟುವ ಸಲುವಾಗಿ, ರೈತರಿಗೆ ರಿಯಾಯಿತಿ ದರದಲ್ಲಿ ಕೀಟನಾಶಕಗಳನ್ನು ವಿವಿಧ ಸಸ್ಯ ಸಂರಕ್ಷಣಾ ಯೋಜನೆಗಳಡಿಯಲ್ಲಿ ಒಟ್ಟು ರೂ. 11.40ಲಕ್ಷ ಬಿಡುಗಡೆ ಮಾಡಲಾಯಿತು. ಪ್ರಸಾರ ಮಾಧ್ಯಮಗಳ ಮೂಲಕ ಕೀಟ ನಿಯಂತ್ರಣಕ್ಕೆ ಹೆಚ್ಚಿನ ಮಾಹಿತಿ ಒದಗಿಸಲಾಯಿತು. ಕೃಷಿ ವಿಶ್ವವಿದ್ಯಾನಿಲಯದ ಕೀಟ ಶಾಸ್ತ್ರಜ್ಞರು ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರು ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಿರುತ್ತಾರೆ.

ಇ) ಪರಿಹಾರ ಧನ ನೀಡುವ ಯಾವುದೇ ಯೋಜನೆ ಇರುವುದಿಲ್ಲ. ಆದರೆ, 1992–93ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯನ್ನು ಗುಲ್ಬರ್ಗಾ ಜಿಲ್ಲೆಯ ಆಳಂದ್, ಚಿಂಚೋಳಿ, ಚಿತ್ತಾಪುರ, ಗುಲ್ಬರ್ಗಾ, ಸೇಡಂ, ಅಫಜಲಪುರ, ಜೇವರ್ಗಿ, ಶಹಾಪೂರ ಶೋರಾಪುರ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ತೊಗರಿಬೆಳೆಗೆ ಜಾರಿಗೊಳಿಸಲಾಗಿದೆ. ತೊಗರಿ ಬೆಳೆಗೆ ವಿಮೆ ಹಾಡಿಸಿದಲ್ಲಿ, ಮತ್ತು ತಾಲ್ಲೂಕಿನಲ್ಲಿ ಈ ವರ್ಷ ಪಡೆಯಲಿರುವ ಇಳುವರಿಯು ತಾಲ್ಲೂಕಿಗೆ ನಿರ್ಧರಿಸಿರುವ ಪ್ರಾರಂಭಿಕ ಇಳುವರಿಗಿಂತ ಕಡಿಮೆಯಾದಲ್ಲಿ ರೈತರು ಪರಿಹಾರ ಪಡೆಯಲು ಅರ್ಹರಾಗುತ್ತಾರೆ.

ಇ) ವಿಸ್ತರಣಾ ಕಾರ್ಯಕರ್ತರು ಮತ್ತು ಸಾಮೂಹಿಕ ಪ್ರಸಾರ ಮಾಧ್ಯಮಗಳ ಮೂಲಕ ರೈತರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹೆಚ್ಚಿನ ವಿವರ ನೀಡಲಾಗುವುದು. ರೈತರಿಗೆ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಮತ್ತು ಉಪಕರಣಗಳನ್ನು ಒದಗಿಸಲಾಗುವುದು.

ಶ್ರೀ ಬಾಬುರಾವ್ ಚವಾಣ್:– ಮಾನ್ಯ ಸಭಾಧ್ಯಕ್ಷೀಣಿಯವರೇ, ನಾನು ಕೇಳಿದಂಥ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿಬೆಳೆ ಸಂಪೂರ್ಣವಾಗಿ ನಾಶವಾಗಿದೆ, ಇದರಿಂದ ರೈತರು ಕಂಗಾಲಾಗಿದ್ದಾರೆ, ಈಗ ಇರತಕ್ಕಂಥ ಮೇಜರ್ ಕ್ರಾಪ್ ತೊಗರಿ ಹೋಗಿಬಿಟ್ಟಿದೆ ಎಂದು ಆ ವಿಚಾರವಾಗಿ ಮಾನ್ಯ ಮಂತ್ರಿಯವರು 11½ ಲಕ್ಷ 40 ಸಾವಿರ ರೂಪಾಯಿಗಳವರೆಗೆ ಬಿಡುಗಡೆ ಮಾಡಿದ್ದೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ದುಡ್ಡು ಯಾರಿಗೆ ಬಿಡುಗಡೆ ಮಾಡಿದ್ದಾರೆನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಮತ್ತೆ ಇದರ ಜೊತೆಯಲ್ಲಿ 1992–93ನೇ ಸಾಲಿಗಾಗಿ ಇಳುವರಿ ಮೇಲೆ ರೈತರಿಗೆ ಕೊಡುವಂಥ ಪರಿಹಾರಧನದ ಮೊತ್ತವನ್ನು ಇಲ್ಲಿ ಹೇಳಿದ್ದಾರೆ. ಆದರೆ

ಎಷ್ಟು ಜನ ರೈತರು ಕ್ರಾಪ್ ಲೋನ್ ತೆಗೆದುಕೊಂಡಿರುತ್ತಾರೆ ? ಎಷ್ಟು ಪರ್ಸೆಂಟ್ ರೈತರಿಗೆ ನೀವು ಕೊಡುತ್ತೀರೆನ್ನುವುದನ್ನು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ಇದಕ್ಕೆ ಪರಿಹಾರ ಕೆಲವು ಸಲಕರಣೆಗಳ ಮೂಲಕವಾಗಿ ಕೊಡುವುದಕ್ಕೆ ಸಾಧ್ಯವೇ ಹೊರತು, ಲಕ್ಷಾಂತರ ಎಕರೆ ಭೂಮಿಯಲ್ಲಿ ತೊಗರಿ ಬೆಳೆ ಇದೆ. ಅದಕ್ಕೆ ಔಷಧಿಗಳನ್ನು ಒದಗಿಸುವಲ್ಲಿ ಮತ್ತು ಉಳಿದ ಸೌಕರ್ಯಗಳನ್ನು ಯಾವ ರೀತಿಯಾದರೂ ಕಲ್ಪಿಸಬಹುದೇ ಹೊರತು ಇರತಕ್ಕಂಥ ಬೆಳೆಗಳಿಗೆಲ್ಲ ನಾವು ನಷ್ಟವನ್ನು ತುಂಬುತ್ತೇವೆಂದು ಹೇಳುವುದು ಸಾಧ್ಯವಾಗದಂಥ ಪ್ರಶ್ನೆಯಾಗುತ್ತದೆ. ಏತಕ್ಕೆಂದರೆ ಲಕ್ಷಾಂತರ ಎಕರೆ ಭೂಮಿಯಲ್ಲಿ ಇವತ್ತು ತೊಗರಿ ಬೆಳೆ ಇದೆ. ಈ ತೊಗರಿ ಬೆಳೆ ನಾಶವಾಗುತ್ತಿರುವುದು ಈಗ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ ಎಂದು ನಾನು ಈಗಾಗಲೇ ಹೇಳಿದೆ. ಏತಕ್ಕೆಂದರೆ ಇಂತಿಂಥ ಔಷಧಿಗಳನ್ನು ಉಪಯೋಗಿಸಬೇಕೆಂದು ಹೇಳಿ ಇತ್ತೀಚೆಗೆ ನಮ್ಮ ಆಗ್ರಿಕಲ್ಚರ್ ಯೂನಿವರ್ಸಿಟಿ ಧಾರವಾಡದಲ್ಲಿರತಕ್ಕಂಥ ಪರಿಣತರು ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯ ಪ್ರಕಾರ ಔಷಧಿಗಳನ್ನು ಉಪಯೋಗಿಸಿ ರೋಗವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿ ಬಹುಮಟ್ಟಿಗೆ ಕಡಿಮೆಯಾಗುವುದಕ್ಕೆ ಸಹಾಯವಾಗಿದೆ. ಮತ್ತೆ ಇನ್ನೊಂದು ಭಯವೇನೆಂದರೆ ಈ ತೊಗರಿ ಬೆಳೆ ಆದ ಕೂಡಲೇ ಕಡಲೇ ಬೆಳೆ ಬರುತ್ತದೆ. ಈ ಬೆಳೆಗೂ ರೋಗ ತಗುಲಿ ಹಾಳು ಮಾಡತಕ್ಕಂಥ ಪರಿಸ್ಥಿತಿ ಇದೆ. ಇದನ್ನೆಲ್ಲ ತಪ್ಪಿಸುವುದಕ್ಕೆ ಸರ್ವಪ್ರಯತ್ನ ಮಾಡಬೇಕೆಂದು ಈಗಾಗಲೇ ನಮ್ಮ ಪರಿಣತರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ವ್ಯವಸಾಯ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ಅಲ್ಲಿ ಹೋಗಿ ಅಲ್ಲಿ ಇರುವಂಥ ತೊಂದರೆ ತಪ್ಪಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಶ್ರೀ ಬಾಬುರಾವ್ ಚವಾಣ್:– ಮಂತ್ರಿಗಳಿಂದ ನೇರವಾದ ಉತ್ತರ ಬರುತ್ತಿಲ್ಲ. 11 ಲಕ್ಷದ 40 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೀರಿ. ಯಾರಿಗೆ ಬಿಡುಗಡೆ ಮಾಡಿದ್ದೀರಿ ? ರೈತರಿಗೆ ಕೊಟ್ಟಿದ್ದೀರಾ ಅಥವಾ ಮಾರಾಟಗಾರರಿಗೆ ಕೊಟ್ಟಿದ್ದೀರಾ ? ಇಳುವರಿ ಕಡಿಮೆಯಾದವರಿಗೆ ಮಾತ್ರ ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ. ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಿಜವಾದ ಇಳುವರಿಯನ್ನು ತೋರಿಸುತ್ತಾರೆಯೆ ? ಆಫೀಸ್‌ನಲ್ಲಿ ಕುಳಿತು ಏನು ಇಳುವರಿ ತೋರಿಸಲಿಕ್ಕೆ ಸಾಧ್ಯ ? ಇದರಿಂದ ರೈತರಿಗೆ ನ್ಯಾಯ ದೊರೆಯುತ್ತದೆಯೆ ? ಕೋಮು ಗಲಭೆಯಲ್ಲಿ ಸತ್ತವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಧನ ಕೊಡುತ್ತಿದ್ದೀರಿ. ರೈತರು ಕಂಗಾಲಾಗಿ ಹೊಟ್ಟೆಗಿಲ್ಲದವರಿಗೆ ಪರಿಹಾರಧನ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪಕ್ಕೆ ತೊಗರಿ ಬೆಳೆ ಹಾಳಾಗಿದೆ ಎಂದು ಮಂತ್ರಿಗಳು ಹೇಳಿದರು. ಬಳ್ಳಾರಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಿಂದ 200 ರೂಪಾಯಿ ಕೊಟ್ಟಿದ್ದೇವೆ. ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಎಂದು ಕಂದಾಯ ಮಂತ್ರಿಗಳು ಹೇಳಿದರು. ಅದೇ ರೀತಿ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾಗಿ ತೊಗರಿ ಬೆಳೆ ಹಾಳಾಗಿದೆ ಎಂದು 2–3 ನೂರು ರೂಪಾಯಿ ಕೊಡುತ್ತೀರಾ ? ಈ ಬಗ್ಗೆ ಮಂತ್ರಿಗಳು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ನಾಶವಾಗಿರತಕ್ಕ ಬೆಳೆಗೆ ಪರಿಹಾರ ಕೊಡುವುದು ಸಾಧ್ಯವೇ ಆನ್ನುವ ಹಾಗೆ ಇದೆ ಪ್ರಶ್ನೆ. ಲಕ್ಷಾಂತರ ಎಕರೆ ಭೂಮಿಯಲ್ಲಿ ಬೆಳೆ ರೈತರ ಕೈಸೇರುವ ಸ್ಥಿತಿಯಲ್ಲಿ ಇಲ್ಲ. ಅದು ರೈತರಿಂದ ತಪ್ಪಾಗಿರಬಹುದು, ಅಥವಾ ಇಲಾಖೆಯ ಪರಿಣಿತರು ಹೇಳಿರತಕ್ಕ ಔಷಧಿಯನ್ನು ಉಪಯೋಗಿಸದೆ ಇರುವುದರಿಂದ ಆಗಿರಬಹುದು. ಪ್ರಕೃತಿದತ್ತವಾದ ಮಳೆ ಕಾಲಕ್ಕೆ ಸರಿಯಾಗಿ ಬರಲಿಲ್ಲವೆಂದು ಪ್ರಶ್ನೆ ಬಂದಾಗ ಹೇಳಿದೆ, ಹಿಂಗಾರು ಮಳೆ ಬರುವುದು ತಡವಾದುದರಿಂದ ಒತ್ತನೆ ತಡವಾಯಿತು ಮತ್ತು ನವೆಂಬರ್ ತಿಂಗಳಲ್ಲಿ ಎಂದೂ ಬಾರದೆ ಇರತಕ್ಕ ಮಳೆ ಬಂದು ಮೋಡ

ಕಟ್ಟಿ ಹುಳುಗಳು ಬೆಳೆಯನ್ನು ನಾಶ ಮಾಡತಕ್ಕ ಪರಿಸ್ಥಿತಿ ಉಂಟಾದುದು ದುರಾದೃಷ್ಟ. ಹೀಗಿರುವಾಗ ಯಾವ ರೀತಿ ಬೆಳೆ ಮೇಲೆ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆ, ಎಷ್ಟು ಕೊಡಬಹುದು ಎಂಬುದಕ್ಕೆ ಬದಲಾಗಿ ಉಪಕರಣಗಳನ್ನು, ಔಷಧಿಗಳನ್ನು ಉಪಯೋಗಿಸುವುದಕ್ಕೆ ಮತ್ತು ಇನ್ನು ಯಾವ ರೀತಿ ಸಹಾಯ ಮಾಡಬಹುದೆಂದು ಸರ್ಕಾರ ಆಲೋಚನೆ ಮಾಡಿ ತೀರ್ಮಾನ ಕೈಗೊಳ್ಳುತ್ತದೆಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು:– ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ಮಂತ್ರಿಗಳ ಹತ್ತಿರ ಹೋಗಿ ಮಾತನಾಡುವುದು.

ಶಿಕ್ಷಣ ಸಂಸ್ಥೆಗಳವರು ಸರ್ಕಾರಿ ಜಮೀನನ್ನು ಕೋರಿರುವ ಬಗ್ಗೆ

421. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದಾಗಿ ಡೆಂಟಲ್ ಕಾಲೇಜ್, ನರ್ಸಿಂಗ್ ಕಾಲೇಜ್ ಮತ್ತು 'ಬಿ'ಫಾರ್ಮ ಕಾಲೇಜು ಪ್ರಾರಂಭಿಸಲು ಅನುಮತಿ ಪಡೆದ ಎಷ್ಟು ಸಂಸ್ಥೆಯವರು ಬೆಂಗಳೂರು ನಗರ ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಪಡೆಯಲು ಅರ್ಜಿ ಹಾಕಿದ್ದಾರೆ ?

ಆ) ಇವರಲ್ಲಿ ಎಷ್ಟು ಸಂಸ್ಥೆಯವರಿಗೆ ಸರ್ಕಾರಿ ಜಮೀನು ನೀಡಲಾಗಿದೆ ?

ಇ) ಹಾಗಿದ್ದಲ್ಲಿ, ಯಾವ ಆಧಾರದ ಮೇಲೆ ಅವರಿಗೆ ಸರ್ಕಾರಿ ಜಮೀನು ನೀಡಲಾಗಿದೆ ?

ಈ) ಅದಕ್ಕಾಗಿ ಪ್ರತಿ ಎಕರೆಗೆ ಎಷ್ಟು ಹಣವನ್ನು ನಿಗದಿ ಪಡಿಸಲಾಗಿದೆ ?

ಉ) ಒಂದೊಂದು ಸಂಸ್ಥೆಯವರಿಗೆ ಎಷ್ಟೆಷ್ಟು ಜಮೀನು ನೀಡಲಾಗಿದೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:– ಬೆಂಗಳೂರು ನಗರ ಜಿಲ್ಲೆಯಲ್ಲಿ ವಿದ್ಯಾ ಸಂಸ್ಥೆಗಳು ಸರ್ಕಾರಿ ಜಮೀನಿಗೆ ಅರ್ಜಿ ಹಾಕಿಕೊಂಡಿವೆಯೇ ಎಂದರೆ ಇಲ್ಲವೆಂದು ಹೇಳಿದ್ದೀರಿ. ಚಾಮರಾಜ ವಿದ್ಯಾ ಸಂಸ್ಥೆ ಮತ್ತು ಈಸ್ಟ್–ವೆಸ್ಟ್ ವಿದ್ಯಾ ಸಂಸ್ಥೆಗಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 20–20 ಎಕರೆ ಜಮೀನು ಕೊಟ್ಟಿದ್ದಾರೆ. ವಿದ್ಯಾ ಸಂಸ್ಥೆಯವರು ವಿದ್ಯಾರ್ಥಿಗಳಿಂದ ಹಣ ಪಡೆಯುತ್ತಾರೆ ಮತ್ತು ಸರ್ಕಾರದಿಂದ ಜಮೀನುಗಳನ್ನು ಪಡೆಯುತ್ತಾರೆ. ಅವರು 500 ಎಕರೆ ಕೇಳಿದ್ದರೆ 20 ಎಕರೆ ಕೊಟ್ಟಿದ್ದಾರೆ. ಖಾಸಗಿಯವರಿಂದ 2–3 ಲಕ್ಷ ರೂಪಾಯಿಗಳನ್ನು ಕೊಟ್ಟು ಜಮೀನು ಸ್ವಾಧೀನ ಮಾಡಿಕೊಂಡು ಕೊಟ್ಟಿದ್ದಾರೆ. ಸರ್ಕಾರ ಆ ವಿದ್ಯಾ ಸಂಸ್ಥೆಗಳಿಗೆ ಜಮೀನು ಕೊಟ್ಟಿರುವುದನ್ನು ವಜಾ ಮಾಡಬೇಕು. ನಾನು ಪ್ರಶ್ನೆಯಲ್ಲಿ ನಗರ ಜಿಲ್ಲೆ ಎಂದು ಕೇಳಿದ್ದೇನೆ. ಗ್ರಾಮಾಂತರ ಜಿಲ್ಲೆಯಲ್ಲಿ ವಿದ್ಯಾ ಸಂಸ್ಥೆಗಳಿಗೆ